<u>ದಿ:**27.09.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು</u>:- ಆರೋಪಿ ಪರ G.H.S., ವಕೀಲರಿಂದ:-

ನನಗೆ ಪೊಲೀಸರು ಆರೋಪಿ ನೀಡಿದ ದೂರಿನ್ವಯ ಹೇಳಿಕೆಯನ್ನು ನೀಡುವ ಸಂದರ್ಭದಲ್ಲಿ ಬೇರೆ ಜನರ ಹೇಳಿಕೆ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಮಂಜುನಾಥ , ಲೊಕೇಶ್ ಮತ್ತು ಭರತ್ ರಾಜ್ ಎಂಬುವವರು ಪರಿಚಯ ಇರುವುದಿಲ್ಲ . ಈ ದಿನ ನ್ಯಾಯಾಲಯದ ಆವರಣದಲ್ಲಿ ಸದರಿ ಮಂಜುನಾಥ , ಲೊಕೇಶ್ ಮತ್ತು ಭರತ್ ರಾಜ್ ಎಂಬುವವರು ಹಾಜರು ಇರುತ್ತಾರೆ ಎಂದರೆ ಸರಿ. ನಾನು ಅವರೊಂದಿಗೆ ಈ ಪ್ರಕರಣ ಕರೆಯುವ ಮುಂಚೆ ಜೊತಗೆ ಸಂಭಾಷಣೆ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ನನಗೆ ಮಂಜುನಾಥ , ಲೊಕೇಶ್ ಮತ್ತು ಭರತ್ ರಾಜ್ ಯಾವ ಕೆಸಲ ಮಾಡುತ್ತಾರೆ ನನಗೆ ಗೊತ್ತಿಲ್ಲ. ನನಗೆ ಬಸವರಾಜ್ ತಂದೆ ಶೇಖರಪ್ಪ , ಲೋಹಿತ್ ತಂದೆ ತಿಪ್ಪೇಸ್ವಾಮಿ , ಚನ್ನಬಸಪ್ಪ ತಂದೆ ತಿಪ್ಪೇಸ್ವಾಮಿ ಮತ್ತು ಮಂಜುನಾಥ ತಂದೆ ಬಸವರಾಜಪ್ಪ ನನಗೆ ಪರಿಚಯ ಇರುವುದಿಲ್ಲ . ಸದರಿರವರು ಜೆಡ್ಡಿಕೆರೆ , ಜಗಳೂರು ಟೌನ್ , ಕಣವಕುಪ್ಪೆ ಮತ್ತು ರಾಮಾಲಯ ರಸ್ತೆ ಜಗಳೂರು ಪಟ್ಟಣದ ನಿವಾಸಿಗಳು ಹಾಗು ತಾಲ್ಲೂಕು ಕಛೇರಿ ಹಿಂಭಾಗದ ವಾಸಿಗಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ಚೆಕ್ ನನ್ನ ಬಳಿ 1 ತಿಂಗಳು ಇರುತ್ತದೆ . ನಿಪಿ 1 ಚೆಕ್ ದಿ:15.05.2021 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ನನ್ನ ಬಳಿ ಬಂದಿರುತ್ತದೆ . ನಿಪಿ 1 ನನ್ನ ವಶಕ್ಕೆ ಬಂದಂಥದ್ದನ್ನು ಯಾರ ನೋಡಿರುವುದಿಲ್ಲ . ನಿಪಿ1 ಚೆಕ್ ಅನ್ನು ನಾನು ಪರಿಶೀಲನೆ ಮಾಡಿರುತ್ತೇನೆ . ನಿಪಿ 1 ಚೆಕ್ ನಲ್ಲಿರುವ ಸಹಿ , ದಿನಾಂಕ , ಹೆಸರು ಮತ್ತು ಬರವಣಿಗೆ ಭಿನ್ನವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ದಿನಾಂಕ, ಮೊತ್ತ, ಸಹಿಯು ಬರವಣಿಗೆಯೊಂದಿಗೆ ಹೋಲಿಸಿದಾಗ ಬರಿಗಣ್ಣಲ್ಲಿ ವ್ಯತ್ಯಾಸ ಕಾಣುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 1 ರಲ್ಲಿ ಬರವಣಿಗೆಯಾ ಮತ್ತು ಸಹಿಯಾ ಸಹ ಬೇರೆ ಅಕ್ಷರ ಕಾಣುತ್ತದೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಹೆಸರು ಮತ್ತು ಬರವಣಿಗೆ ಹಾಗೂ ಸಹಿಯೂ ಬೇರೆ ಬೇರ ವ್ಯಕ್ತಿಗಳು ಪೆನ್ನು ಮತ್ತು ಶಾಹಿ {INK) ಗಳಿಂದ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ 1 ರಲ್ಲಿ ಸಹಿ ದಿನಾಂಕ ಮತ್ತು ಮೊತ್ತದ ಮೆಲೆ ಇರುವ ಪ್ಲಾಸ್ಟರ್ ಅನ್ನು ನನ್ನ ವಶಕ್ಕೆ ಬಂದ ನಂತರ ನಾವು ಹಚ್ಚಿರುತ್ತೇವೆ . ಸದರಿ ಪ್ಲಾಸ್ಟರ್ ಅನ್ನು ನಾವು ಬೇರೆಯವರು ತಿದ್ದಬಾರದು ಎಂದು ಹಚ್ಚಿರುತ್ತೇವೆ . ನಿಪಿ 1 ಚೆಕ್ ನ ಮೆಲೆ ಪ್ಲಾಸ್ಟರ್ ಹಚ್ಚುವ ಮುಂಚೆ ನಾನು ಅದರ ಪ್ರತಿಯನ್ನು ಪಡೆದುಕೊಂಡಿರುವುದಿಲ್ಲ . ಸಾಮಾನ್ಯವಾಗಿ ಚೆಕ್ ನ ಹಿಂಬದಿಯಲ್ಲಿ ಒಬ್ಬರಿಗೆ ನೀಡುವ ಉದ್ದೇಶದಿಂದ ಸಹಿ

ಮಾಡುವ ಅವಶ್ಯಕತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ರ ಚೆಕ್ ನ ಹಿಂಭಾಗ ಭರತ್ ಕುಮಾರ್ ಜೆ ಎನ್ ಎಂಬ ಬರವಣಿಗೆ ಇರುತ್ತದೆ . ಸಾಕ್ಷಿ ಮುಂದುವರೆಸಿ ಭರತ್ ಕುಮಾರ್ ಜೆ ಹೆಚ್ ಎಂದು ಹೇಳುತ್ತಾರೆ . ಸದರಿ ಸಹಿಯನ್ನು ಸಾಕ್ಷಿ ಒಪ್ಪಿದ ಮೇರೆಗೆ ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ನಿಡಿ 3 ಬರವಣಿಗೆ ಮತ್ತು ನಿಪಿ 1(ಎ)ರಲ್ಲಿರುವ ಸಹಿಗೂ ವ್ಯತ್ಯಾಸ ಇರತ್ತದೆ ಎಂದರೆ ಸಾಕ್ಷಿ ನಿಪಿ 1(ಎ) ಸಹಿಯ ಮೇಲೆ ಪ್ಲಾಸ್ಟರ್ ಹಚ್ಚಿದ ಕಾರಣ ವ್ಯತ್ಯಾಸ ಕಾಣುತ್ತದೆ ಎಂದು ಹೇಳುತ್ತಾರೆ . ಸದರಿ ನಿಡಿ 3 ಬರವಣಿಗೆ ಮತ್ತು ನಿಪಿ 1(ಎ) ಸಹಿಯ ಬಿನ್ನವಾಗಿ ಮೇಲ್ನೋಟಕ್ಕೆ ಕಾಣುತ್ತದೆ , ಆದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 3 ರಲ್ಲಿರುವ ಬರವಣಿಗೆ ಮತ್ತು ನಿಪಿ1(ಎ) ಸಹಿಯೂ ಆರೋಪಿಯದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಚೆಕ್ ರಲ್ಲಿರುವ ಉಳಿದ ದಿನಾಂಕ ,ಮೊತ್ತ ಮತ್ತು ಬರವಣಿಗೆ ಆರೋಪಿಯದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ SELF ಚೆಕ್ ನೀಡಿದರೆ ಚೆಕ್ ನ ಹಿಂದೆ ಖಾತೆ ಹೊಂದಿದವರು ಸಹಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನಿಪಿ 1 ಚೆಕ್ ಅನ್ನು ನಾನು ಬ್ಯಾಂಕ್ ಗೆ ನಗಧೀಕರಣಕ್ಕೆ ಸಲ್ಲಿಸಿದಾಗ ನಮ್ಮ ಬ್ಯಾಂಕ್ ನವರು ಸದರಿ ನಿಪಿ 1 ಮತ್ತು ನಿಡಿ 3 ಬರವಣಿಗೆಯನ್ನು ಪರಿಶೀಲನೆ ಮಾಡಿರುತ್ತಾರೆ . ನಿಪಿ 1 ಅನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪೂರ್ವದಲ್ಲಿ ನಾನು ಜೆರಾಕ್ಸ್ ಪ್ರತಿಯನ್ನು ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಪ್ಲಾಸ್ಟರ್ ಹಚ್ಚಿದ ಮೇರೆಗೆ ನಿಪಿ 2 ಅನ್ನು ನಾವೇ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಬ್ಯಾಂಕ್ ನವರು ಯಾವ ಕಾರಣಕ್ಕೆ ನಿಪಿ 1 ಚೆಕ್ ವಾಪಸಾದ ಬಗ್ಗೆ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಚೆಕ್ ಅನ್ನು ನಾನು ದಿಃ 18.06.2021 ರಂದು ನಗಧೀಕರಣಕ್ಕೆ ಸಲ್ಲಿಸಿರುತ್ತೇನೆ . ಸದರಿ ನಿಪಿ 1 ಚೆಕ್ ದಿಃ 01.07.2021 ಕ್ಕೆ ವಾಪಸ್ಸಾಗಿರುತ್ತದೆ . ನಾನು ಪಿರ್ಯಾದಿನಲ್ಲಿ ತಿಳಿಸಿರುವ ಹಾಗೆ ಸಿಂಡಿಕೇಟ್ ಹಾಗೂ ಕೆನರಾ ಬ್ಯಾಂಕ್ ಬಗ್ಗೆ ನಿಪಿ 2 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆಸಿ ಮೊದಲಿಗೆ ನನ್ನ ಖಾತೆಯು ಸಿಂಡಿಕೇಟ್ ಬ್ಯಾಂಕ್ ನಲ್ಲಿ ಇದ್ದು , ನಂತರ ಅದು ಕೆನರಾ ಬ್ಯಾಂಕ್ ಗೆ ಸೇರಿಕೊಂಡಿರುತ್ತದೆ ಎಂದು ಹೇಳುತ್ತಾರೆ . ನನಗೆ ನಿಪಿ 2 ದಾಖಲೆಯನ್ನು ಕೆನರಾ ಬ್ಯಾಂಕ್ ನವರು ನೀಡಿರುತ್ತಾರೆ . ನನಗೆ ನಿಪಿ 2 ದಾಖಲೆ ಬಿಟ್ಟು ಬೇರೆ ಯಾವ ದಾಖಲೆಗಳನ್ನು ಬ್ಯಾಂಕ್ ನವರು ನೀಡಿರುವುದಿಲ್ಲ . ನನ್ನಿಂದ ಆರೋಪಿಯು ಎಂದಿಗೂ ಸಹ 5 ಲಕ್ಷ ಮೊತ್ತ ಸಾಲವನ್ನು ಪಡೇದಿರುವುದಿಲ್ಲ ,

ಹಾಗೂ ನಿಪಿ 1 ಚೆಕ್ ಅನ್ನು ಸದರಿ ಸಾಲದ ತೀರುವಳಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಹಪಾಠಿಗಳಾಗದ ಮಂಜುನಾಥ C.C. 59/2022, ಲೊಕೇಶ್ CC 25/2022 ಮತ್ತು ಭರತ್ ರಾಜ್ C C 398/2022 ರವರು ಇದೇ ರೀತಿಯ ಚೆಕ್ ಅಮಾನತು ಪ್ರಕರಣಗಳನ್ನು ಆರೋಪಿ ವಿರುದ್ಧ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಅವರೊಂದಿಗೆ ಶಾಮೀಲಾಗಿ ನಾನು ಸಹ ಸುಳ್ಳು ಪ್ರಕರಣವನ್ನು ಆರೋಪಿ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಿಃ 18.04.2021 ರಂದು ಆರೋಪಿ ನನ್ನ ಬಳಿ ಬಂದು 5 ಲಕ್ಷ ಕೈ ಗಡ ಸಾಲ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ಪಿರ್ಯಾದಿನಲ್ಲಿ ತಿಳಿಸಿರುವ ಹಾಗೆ ಸದರಿ 5 ಲಕ್ಷ ದಿಃ 15.05.2021 ರಂದು ನೀಡಿದ್ದು , ದಿಃ 18.06.2021 ರಂದು ನಿಪಿ 1 ಚೆಕ್ ನೀಡಿರುವ ಬಗ್ಗೆ ಯಾವುದೇ ಬರವಣಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ 1 ಚೆಕ್ ಅನ್ನು ನಗಧೀಕರಣಕ್ಕೆ ದಿಃ 18.06.2021 ರಂದು ಸಲ್ಲಿಸಿರುತ್ತೇನೆ . ನಾನು ಮಂಜುನಾಥ , ಲೊಕೇಶ್ ಮತ್ತು ಭರತ್ ರಾಜ್ ಎಲ್ಲರೂ ಸ್ನೇಹಿತರು ಸೇರಿ ಆರೋಪಿಯ ಅಂಗಡಿಗೆ ಹೋಗಿ ಆತನಿಗೆ ಸಂಬಂದಿಸಿದ 9 ಚೆಕ್ ಗಳನ್ನು ಪಡೆದುಕೊಂಡು ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಕಳುಹಿಸಿದ ನೋಟೀಸ್ ವಿಳಾಸ ಮತ್ತು ಅಂಗಡಿ ವಿಳಾಸ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಾನು ನಿಪಿ 3 ಮತ್ತು 5 ನೋಟೀಸ್ ಅನ್ನು ಉದ್ದೇಶಪೂರ್ವಕವಾಗಿ ಜಾರಿ ಅಗಬಾರದು ಎಂದು ತಪ್ಪು ವಿಳಾಸವನ್ನು ನಮೂದಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ1 ಚೆಕ್ ಹಿಂದುರುಗಿದ ಯಾವ ದಿನಾಂಕದಂದು ನೋಟೀಸ್ ನೀಡಿದ ಬಗ್ಗೆ ನೆನಪು ಇರುವುದಿಲ್ಲ . ನಿಪಿ 5 ಅಂಚೆ ಲಕೋಟೆ ಯು ಆರೋಪಿ ಸ್ವೀಕರಿಸಿರುವುದಿಲ್ಲ ಎಂದು ವಾಪಾಸಾಗಿರುತ್ತದೆ . ನಿಪಿ 5 ಲಕೊಟೆಯನ್ನು ನಮಗೆ ಹಿಂದುರುಗಿದಾಗ ನಂತರ ತೆರೆದಾಗಿತ್ತು ಮತ್ತು ಮುಚ್ಚಿರುವ ಬಗ್ಗೆ ನನಗೆ ನೆನಪಿರುವುದಿಲ್ಲ . ನಿಪಿ 5 ಅಂಚೆ ಲಕೋಟೆಯಲ್ಲಿ PARTY LEFT RETURNED TO SENDER ಎಂದು ಷರಾ ನಮೂದು ಇರುತ್ತದೆ ಎಂದರೆ ಸಾಕ್ಷಿ ನನಗೆ ಆಂಗ್ಲ ಭಾಷ ಒದಲು ಬರುವುದಿಲ್ಲ ಎಂದು ಹೇಳುತ್ತಾರೆ . ನಾನು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ಬಿ.ಎ., ಪದವಿಧರ ಇರುತ್ತೇನೆ . ನಾನು ಆಂಗ್ಲ ಭಾಷಯನ್ನು 5 ನೇತರಗತಿಯಿಂದ ಒದಿಕೊಂಡು ಬಂದಿರುತ್ತೇನೆ ಎಂದರೆ ಸರಿ. ನಿಪಿ 5 ಅಂಚೆ ಲಕೋಟೆ ಯಾವಾಗ ವಾಪಾಸದ ಬಗ್ಗೆ ನನಗೆ ನೆನಪಿರುವುದಿಲ್ಲ . ನಿಪಿ 1 ಚೆಕ್ ನಲ್ಲಿರುವ ಬರವಣಿಗೆಯ ಆಂಗ್ಲ ಭಾಷೆಯಲ್ಲಿ ಇರುತ್ತದೆ ಅದುನ್ನು ಇಲ್ಲಿಯವರೆಗೂ

ಓದಿರುವುದಿಲ್ಲ . ನಾನು ನನ್ನ ವಕೀಲರ ಮೂಲಕ ನಿಪಿ 1 ಅನ್ನು ನಗಧೀಕರಣಕ್ಕೆ ಸಲ್ಲಿಸುವ ಮುಂಚೆ ಅದರ ಮೇಲೆ ಇರುವ ಬರವಣಗೆಯನ್ನು ಓದಿ ತಿಳಿದುಕೊಂಡಿರುತ್ತೇನೆ . ಸದರಿ ವಿಚಾರವನ್ನು ನನ್ನ ಪಿರ್ಯಾದಿನಲ್ಲಿ ನಮೂದಿಸಿರುವುದಿಲ್ಲ . ನನಗೆ ಆರೋಪಿಗೆ 5 ಲಕ್ಷ ನೀಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ **5** ಲಕ್ಷ ವರಮಾನ ಇರುವ ಬಗ್ಗೆ ನ್ಯಾಯಾಲಯದಲ್ಲಿ ದಾಖಲೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ನನ್ನ ಖಾಯಂ ವಿಳಾಸ ಇರುತ್ತದೆ . ನಾನು ಪ್ರಸ್ತುತ ಕಸ್ತೂರಿಪುರ ಗ್ರಾಮದಲ್ಲಿ ವಾಸ ಇರುತ್ತೇನೆ . ಸದರಿ ಕಸ್ತೂರಿಪುರ ಗ್ರಾಮ ಗ್ರಾಮಾಂತರ ಪ್ರದೇಶಕ್ಕೆ ಬರುತ್ತದೆ . ನನಗೆ ಬಿಪಿಎಲ್ ಕಾರ್ಡ್ ಇರುತ್ತದೆ . ನಮ್ಮದು ಬಡತನ ರೇಖೇಗಿಂತ ಕಡಿಮೆ ವರಮಾನ ಇರುವ ಬಡಕುಟುಂಬ ಎಂದರೆ ಸರಿ. ನಾನು ಆರೋಪಿಗೆ 5 ಲಕ್ಷ ನೀಡಿದೆ ಎಂದು ಹೇಳುವ ಹಣವು ಬೇರೆಯವರಿಂದ ಸಾಲ ಮಾಡಿ ನೀಡಿರುತ್ತೇನೆ . ನಾನು ಸಾಲ ಪಡೆದವರ ಹೆಸರು ಮತ್ತು ವಿಳಾಸವನ್ನು ಹೇಳಲು ಆಗುವುದಿಲ್ಲ . ಅವರು ಜೀವಂತ ಇರುತ್ತಾರೆ . ಸದರಿ 5 ಲಕ್ಷ ಹಣವನ್ನು ಯಾರಿಂದ ಪಡೆದಿರುತ್ತೇನೆ ಎಂದು ನ್ಯಾಯಾಲಯಕ್ಕೆ ಯಾವ ಕಾರಣದಿಂದ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ನನಗೆ ಮತ್ತು ಸಾಲ ನೀಡಿದವರ ನಡೆದ ಗುಟ್ಟಾದ ವ್ಯವಹಾರ ಇರುತ್ತದೆ ಎಂದು ಹೇಳುತ್ತಾರೆ . ನಾನು ಮತ್ತು ನನಗೆ 5 ಲಕ್ಷ ಸಾಲ ನೀಡಿದವರ ನಡುವೆ ಬರವಣಿಗೆ ಮೂಲಕ ಯಾವುದೇ ವ್ಯವಹಾರ ನಡೆದಿರುವುದಿಲ್ಲ , ಸಾಕ್ಷಿ ಮುಂದುವರೆಸಿ ನನಗೆ ವಿಶ್ವಾದಿಂದ ನೀಡಿರುತ್ತಾರೆ ಎಂದು ಹೇಳುತ್ತಾರೆ . ಸದರಿರವರಿಂದ ನಾನು 5 ಲಕ್ಷ ಪಡೆದ ಮುಂಚೆಯೂ ಕೂಡ ಹಣದ ವ್ಯವಹಾರ ಮಾಡಿರುತ್ತೇನೆ . ನನಗೆ 5 ಲಕ್ಷ ಹಣವನ್ನು ಸದರಿಯವರು ನಗದಿನ ರೂಪದಲ್ಲಿ ನೀಡಿರುತ್ತಾರೆ , ಸದರಿ ವ್ಯವಹಾರವನ್ನು ಯಾರು ಸಹ ನೋಡಿರುವುದಿಲ್ಲ. ನಾನು ಬೇರೆಯವರಿಂದ 5 ಲಕ್ಷ ಹಣವನ್ನು ಸಾಲಮಾಡಿಕೊಂಡು ಆರೋಪಿಗೆ ಸಾಲ ನೀಡುವ ಪ್ರಸಂಗ ಇರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರವನ್ನು ನನ್ನ ಪಿರ್ಯಾದು**,** ನೋಟೀಸ್ ಮತ್ತು ಮುಖ್ಯವಿಚಾರಣೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1(ಎ) ಮತ್ತು ನಿಡಿ 3 ರ ಸಹಿ ಮತ್ತು ಬರವಣಿಗೆಯನ್ನು ಆರೋಪಿ ಸಹಿಯನ್ನು ತಜ್ಞರ ಅಭಿಪ್ರಯ ಕೇಳಲು ಕಳುಹಿಸಿಕೊಡಲು ನನ್ನ ಅಭ್ಯಂತರ ಇರುವುದಿಲ್ಲ . ನಿಪಿ 1(ಎ) ಮತ್ತು ನಿಡಿ 3 ಎರಡು ಸಹಿಗಳನ್ನು ಆರೋಪಿ ನನ್ನ ಸಮಕ್ಷಮ ಮಾಡಿರುತ್ತಾರೆ .

ನಾನು ಆರೋಪಿಯದ್ದು ಸಹಿ ಮತ್ತು ಬರವಣಿಗೆ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

sd/-

ಸಿವಿಲ್ ನ್ಯಾಯಾಧೀಶರು, ಜಗಳೂರು